ಸಹಕಾರಚುನಾವಣಾ ಪ್ರಾಧಿಕಾರ,
ಟಿ.ಟಿ.ಎಂ.ಸಿ.ಕಟ್ಟಡ, 3ನೇಮಹಡಿ, ಶ್ರೀ ಕೆಂಗಲ್ ಹನುಮಂತಯ್ಯರಸ್ತೆ, ಶಾಂತಿನಗರ, ಬೆಂಗಳೂರು-560027.
E-mail : coea-coop@karnataka.gov.in website: coea.karnataka.gov.in
Phone : 080-22220066 / 29709014

ಸಂಖ್ಯೆ : ಸಚುಪ್ರಾ/ಬೆಂ.ಪ್ರಾ/ಆಡಳಿತ/39(1)/ತಿದ್ದುಪಡಿ/2020-21 ದಿನಾಂಕ 15.09.2021

ಇವರಿಗೆ :-

01. ಪ್ರಾದೇಶಿಕ ಆಯುಕ್ತರು ಹಾಗೂ ಅಪೆಕ್ಸ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು, ಬೆಂಗಳೂರು ವಿಭಾಗ / ಮೈಸೂರು ವಿಭಾಗ / ಬೆಳಗಾವಿ ವಿಭಾಗ / ಕಲಬುರಗಿ ವಿಭಾಗ.
02. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಫೆಡರಲ್ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು.
03. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರು / ಜಂಟಿ ನಿಬಂಧಕರುಗಳಿಗೆ.
04. ಸಹಕಾರ ಸಂಘಗಳ ಜಂಟಿ ನಿಬಂಧಕರು (ಚುನಾವಣೆಗಳು) ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು.
05. ಕೇಂದ್ರ ಸ್ಥಾನಿಕ ಸಹಾಯಕರು, ಸಹಕಾರ ಸಂಘಗಳ ಜಂಟಿ ನಿಬಂಧಕರ ಕಛೇರಿ, ಬೆಳಗಾವಿ ಪ್ರಾಂತ, ಬೆಳಗಾವಿ.
06. ಸಹಕಾರ ಸಂಘಗಳ ಉಪ ನಿಬಂಧಕರು, ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು (ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ)
07. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ) ಕಾಡಾ, ಬೆಳಗಾವಿ.
08. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ) ಕಾಡಾ, ಕಲಬುರಗಿ.
09. ಭೂ ಅಭಿವೃದ್ಧಿ ಅಧಿಕಾರಿ (ಸಹಕಾರ) ಕಾಡಾ, ಮೈಸೂರು.
10. ಸಹಕಾರ ಸಂಘಗಳ ಪ್ರಾಂತೀಯ ಜಂಟಿ ನಿಬಂಧಕರು, ಪ್ರಾಥಮಿಕ ಮತ್ತು ಮಾಧ್ಯಮಿಕ ಸಹಕಾರ ಸಂಘಗಳ ಚುನಾವಣಾಧಿಕಾರಿಗಳು, ಬೆಂಗಳೂರು ಪ್ರಾಂತ / ಮೈಸೂರು ಪ್ರಾಂತ / ಬೆಳಗಾವಿ ಪ್ರಾಂತ / ಕಲಬುರಗಿ ಪ್ರಾಂತ.
11. ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪ ನಿಬಂಧಕರು ಹಾಗೂ ಬೆಂಗಳೂರು ನಗರ ಜಿಲ್ಲೆಯ ಸಹಕಾರ ಸಂಘಗಳ ಉಪನಿಬಂಧಕರು, 1ನೇ ವಲಯ / 2ನೇ ವಲಯ / 3ನೇ ವಲಯ / 4ನೇ ವಲಯ.
12. ಎಲ್ಲಾ ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ.
13. ತಾಲ್ಲೂಕು ಮಟ್ಟದ ಸಹಕಾರ ಅಭಿವೃದ್ಧಿ ಅಧಿಕಾರಿಗಳಿಗೆ ವ್ಯಾಪ್ತಿಯ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಮುಖಾಂತರ.
14. ಸಹಕಾರ ಚುನಾವಣಾ ಪ್ರಾಧಿಕಾರದ ಅಧಿಕಾರಿ / ಸಿಬ್ಬಂದಿಯವರಿಗೆ.

ಮಾನ್ಯರೆ,

ವಿಷಯ : ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ತಿದ್ದುಪಡಿಯಾಗಿರುವ ಬಗ್ಗೆ.

ಉಲ್ಲೇಖ : 1) ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಸಹಕಾರ ಇಲಾಖೆ ಇವರ ಅಧಿಸೂಚನೆ ಸಂಖ್ಯೆ : ಸಿಒ/71/ಸಿಎಲ್ಎಂ/2020 (ಇ), ದಿನಾಂಕ 08.12.2020.
2) ಈ ಕಛೇರಿಯ ಸುತ್ತೋಲೆ ಸಂಖ್ಯೆ : ಸಚುಪ್ರಾ/ಆಡಳಿತ/39/ತಿದ್ದುಪಡಿ/2020-21 ದಿನಾಂಕ 18.01.2021.

★★★★★

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಅಧಿಸೂಚನೆಯಲ್ಲಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 13ಡಿ – ಮತದಾರರ ಪಟ್ಟಿ ತಯಾರಿಕೆಗೆ ಸಂಬಂಧಿಸಿದಂತೆ ಸಹಕಾರ ಸಂಘಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು / ಕಾರ್ಯವ್ಯಾಪ್ತಿಯ ಚುನಾವಣಾಧಿಕಾರಿಗಳು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಉಪ ನಿಯಮ " (2-A) (i), (ii), (iii), (iv), (v), (vi) " ಗಳನ್ನು ಹೊಸದಾಗಿ ಸೇರ್ಪಡೆ ಮಾಡಿ ಸದರಿ ನಿಯಮಕ್ಕೆ ತಿದ್ದುಪಡಿಯನ್ನು ತಂದು ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ.

ಈ ಸಂಬಂಧವಾಗಿ ತಿದ್ದುಪಡಿಯಾದ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960 ರ ನಿಯಮ-13D (2-A)(ii) ರಲ್ಲಿ "ಪ್ರತಿ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಯು ಮೇಲಿನಂತೆ ಸಿದ್ದಪಡಿಸಿದ ತಿಳುವಳಿಕೆಯನ್ನು ಎಲ್ಲಾ ಅನರ್ಹ ಸದಸ್ಯರಿಗೆ ಮಂಡಲಿ ಚುನಾವಣೆ ದಿನಾಂಕದ 6 ತಿಂಗಳ ಮುಂಚಿನ 15 ದಿನಗಳ ಪೂರ್ವದಲ್ಲಿ (ಚುನಾವಣೆ ದಿನಾಂಕದ 195 ದಿನಗಳ ಪೂರ್ವದಲ್ಲಿ) ನೊಂದಾಯಿತ ಅಂಚೆ ಮೂಲಕ ಕಳುಹಿಸತಕ್ಕದ್ದು ಮತ್ತು ಅಂತಹ ಸದಸ್ಯರಿಗೆ ತಿಳುವಳಿಕೆ ತಲುಪಿದ ಹದಿನೈದು ದಿನಗಳಲ್ಲಿ ಆಕ್ಷೇಪಣೆಯನ್ನು ಸಲ್ಲಿಸಲು ಅವಕಾಶ ನೀಡತಕ್ಕದ್ದು".

ಅದರಂತೆ, ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-13D ತಿದ್ದುಪಡಿಯಿಂದ ಹೊಸದಾಗಿ ಸೇರ್ಪಡೆಯಾದ ಉಪ ನಿಯಮ-(2-A) (ii) ರಂತೆ ಆಡಳಿತ ಮಂಡಲಿಯ ಚುನಾವಣೆಗೆ ಬಾಕಿ ಇರುವ ಯಾವೆಲ್ಲಾ ಸಹಕಾರ ಸಂಘಗಳ ಆಡಳಿತ ಮಂಡಲಿ ಚುನಾವಣೆಗೆ 195 ದಿನಗಳು ಸಿಗುತ್ತವೆಯೋ, ಅಂತಹ ಸಹಕಾರ ಸಂಘಗಳಿಗೆ ಸದರಿ ತಿದ್ದುಪಡಿ ನಿಯಮವು ಅನ್ವಯವಾಗುತ್ತದೆಂದು ಎಲ್ಲಾ ವಿಧದ ಸಹಕಾರ ಸಂಘಗಳ ಚುನಾವಣಾಧಿಕಾರಿಗಳಿಗೆ ತಿಳಿಸುತ್ತಾ, ಆಯಾಯ ಜಿಲ್ಲೆಗಳ ಉಪ ನಿಬಂಧಕರು / ಚುನಾವಣಾಧಿಕಾರಿಗಳು ಸಹಕಾರ ಸಂಘಗಳ ಕಾರ್ಯದರ್ಶಿ / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆ ಕರೆದು ಅವರುಗಳಿಗೆ ತಿದ್ದುಪಡಿ ನಿಯಮದ ಅನುಷ್ಠಾನದ ಬಗ್ಗೆ ಮಾಹಿತಿ ನೀಡುವಂತೆ ಉಲ್ಲೇಖ(2)ರ ಈ ಕಛೇರಿಯ ಸುತ್ತೋಲೆಯಲ್ಲಿ ತಮಗೆ ತಿಳಿಸಲಾಗಿತ್ತು.

ಈ ಸಂಬಂಧವಾಗಿ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-13D ತಿದ್ದುಪಡಿಯಿಂದ ಹೊಸದಾಗಿ ಸೇರ್ಪಡೆಯಾದ ಉಪ ನಿಯಮ-(2-A) (ii) ರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ತಹಲ್‌ವರೆವಿಗೂ ತಮ್ಮ ಹಂತದಲ್ಲಿ ತೆಗೆದುಕೊಳ್ಳಲಾಗಿರುವ ಕ್ರಮ ಹಾಗೂ ನಡೆಸಿರುವ ಸಹಕಾರ ಸಂಘಗಳ ಕಾರ್ಯದರ್ಶಿ / ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯ ಮಾಹಿತಿಯ ವಿವರಗಳನ್ನು ಈ ಕಛೇರಿಗೆ 7 ದಿನಗಳೊಳಗೆ ತಪ್ಪದೆ ಈ ಕಛೇರಿಯ ಹೊಸ ಇಮೇಲ್ ವಿಳಾಸ **coea-coop@karnataka.gov.in** ಕ್ಕೆ ತಪ್ಪದೆ ಪೂರಕ ದಾಖಲೆಗಳೊಂದಿಗೆ ಮಾಹಿತಿಯನ್ನು ಹಾಗೂ ಕೈಗೊಂಡ ಕ್ರಮ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ತಿಳಿಸಿದೆ.

ತಮ್ಮ ವಿಶ್ವಾಸಿ,

(ಡಾ: ಎನ್.ಎಸ್.ಚನ್ನಪ್ಪಗೌಡ) 13/9.
ಆಯುಕ್ತರು,
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು-27.